# ಟ್ರ್ಯಾಕ್‌ನಲ್ಲೊಂದು ಲ್ಯಾಂಬೊರ್ಗಿನಿ

■ ಪ್ರವೀಣ ಕುಲಕರ್ಣಿ




ಕಾಡಿನಲ್ಲಿ ಚಿರತೆಗಳು ಹೇಗೆ ಓಡುತ್ತವೆ? ಈ ಪ್ರಶ್ನೆಗೆ, 'ಕ್ರೀಡಾಂಗಣದಲ್ಲಿ ಅಮೆರಿಕದ ಓಟಗಾರ್ತಿ ಶಾ'ಕೆರ್ರಿ ರಿಚರ್ಡ್ಸನ್ ಅವರು ಓಡುವಂತೆ' ಎಂದು ಥಟ್ಟನೇ ಉತ್ತರ ನೀಡುತ್ತಾರೆ ಜಗತ್ತಿನ ಅಥ್ಲೆಟಿಕ್ಸ್ ಅಭಿಮಾನಿಗಳು. ಹೌದು, ಶಾ'ಕೆರ್ರಿ ಅವರ ಓಟದ ಪರಿ ಎಂಥವರೂ ನಿಬ್ಬೆರಗಾಗುವಂತೆ ಮಾಡುತ್ತದೆ. ಚಿರತೆಯನ್ನೂ ನಾಚಿಸುವಂತಹ ಮತ್ತು ಅದರ ವೇಗವನ್ನೂ ಹಿಮ್ಮೆಟ್ಟಿಸುವಂತಹ ಓಟ ಈ ಕ್ರೀಡಾಪಟುವಿನದು. ಟೋಕಿಯೊ ಒಲಿಂಪಿಕ್ ಕೂಟಕ್ಕೆ ಅರ್ಹತೆ ಗಿಟ್ಟಿಸಿದರೂ ಉದ್ದೀಪನ ಮದ್ದು ಪರೀಕ್ಷೆಯಲ್ಲಿ ಸಿಕ್ಕಿಬಿದ್ದು, ಸ್ಪರ್ಧೆಯಿಂದಲೇ ಹೊರಬಿದ್ದಿದ್ದ ಈಕೆ, ಪ್ಯಾರಿಸ್ ಕೂಟದ ವೇಳೆ ಫೀನಿಕ್ಸ್‌ನಂತೆ ಎದ್ದುಬಂದ ಪರಿ ಅನನ್ಯ.

ನೆಟ್‌ಫ್ಲಿಕ್ಸ್‌ನಲ್ಲಿ ಈ ಹಿಂದೆ ಜಗತ್ತಿನ ಟ್ರ್ಯಾಕ್ ತಾರೆಯರ ಕುರಿತು ಒಂದು ಸರಣಿಯನ್ನು ಮಾಡಲಾಗಿತ್ತು. ತಮ್ಮ ಓಟದ ಪರಿಯನ್ನು ಬಣ್ಣಿಸಲು ಶಾ'ಕೆರ್ರಿ, 'ನಾನೊಂದು ಬೆಂಟ್ಲಿ ಕಾರು ಇದ್ದಂತೆ' ಎಂದು ಹೇಳಿದ್ದರು. ಕಾರುಗಳ ಕುರಿತು ಈ ಕ್ರೀಡಾಪಟುವಿಗೆ ಅಷ್ಟೊಂದು ಕಡಿಮೆ ಮಾಹಿತಿ ಇತ್ತು. ಏಕೆಂದರೆ, ಬೆಂಟ್ಲಿ ಕಾರಿನಲ್ಲಿ ಅಂತಹ ಅತ್ಯಾಧುನಿಕ ಸೌಲಭ್ಯಗಳು ಇರುವುದಿಲ್ಲ, ಅವುಗಳ ವೇಗವೂ ಹೇಳಿಕೊಳ್ಳುವಂತಿಲ್ಲ, ನೋಡಲು ದೊಡ್ಡದಾಗಿ ಕಂಡರೂ ಅಷ್ಟೊಂದು ಐಷಾರಾಮಿ ಸಹ ಅಲ್ಲ. ಆದರೆ, ಶಾ'ಕೆರ್ರಿ? ಅವರೊಬ್ಬ ಲ್ಯಾಂಬೊರ್ಗಿನಿ. ವೇಗದ ವಿಷಯಕ್ಕೆ ಮಾತ್ರವಲ್ಲ, ಎಂತಹ ಸನ್ನಿವೇಶವನ್ನೂ ಮೆಟ್ಟಿ ನಿಂತು, ಆ ಕಾರಿನಂತೆಯೇ ಸದ್ದು ಮಾಡುತ್ತಾ, ಗಮನಸೆಳೆಯುತ್ತಾ ಯಶಸ್ಸಿನತ್ತ ದಾಪುಗಾಲು ಹಾಕುವ ವಿಷಯಕ್ಕೂ ಈ ಹೋಲಿಕೆ ಸರಿಹೊಂದುತ್ತದೆ ಎಂದು ಕ್ರೀಡಾ ಬರಹಗಾರ ಆ್ಯಂಡ್ರ್ಯೂ ಲಾರೆನ್ಸ್ ಅಭಿಪ್ರಾಯಪಡುತ್ತಾರೆ. ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಅಮೆರಿಕದ ಈ 'ವೇಗದ ಚಿರತೆ' ಗೆದ್ದಿರುವುದು ಬೆಳ್ಳಿಯನ್ನಾದರೂ ಜಾಗತಿಕ ಕ್ರೀಡಾ ಕ್ಷಿತಿಜದಲ್ಲಿ ಚಿನ್ನದಂತೆ ಹೊಳೆಯುತ್ತಿದೆ.

ಜಗತ್ತಿನ ಅತ್ಯಂತ ಮಹತ್ವದ ಅಥ್ಲೀಟ್‌ಗಳಲ್ಲಿ ಒಬ್ಬರಾಗಿರುವ 24ರ ಹರೆಯದ ಶಾ'ಕೆರ್ರಿ ಅವರದು ಬಲು ವಿಶಿಷ್ಟ ವ್ಯಕ್ತಿತ್ವ. ಮೈತುಂಬಾ ಹಚ್ಚೆ ಹಾಕಿಸಿಕೊಂಡು, ಉದ್ದುದ್ದದ ಅಕ್ರಿಲಿಕ್ ಉಗುರುಗಳನ್ನು ಬೆರಳುಗಳಿಗೆ ಸಿಕ್ಕಿಸಿಕೊಂಡು, ಬಣ್ಣ ಬಣ್ಣದ ಕೂದಲಿನ ವಿಗ್ ಹಾಕಿಕೊಂಡು ಓಟಕ್ಕೆ ನಿಲ್ಲುವ ಶಾ'ಕೆರ್ರಿ, ಅಮೆರಿಕದ ಕ್ರೀಡಾ ಜಗತ್ತು ಇದುವರೆಗೆ ಕಂಡ ಅತ್ಯಂತ ವೇಗದ ಓಟಗಾರ್ತಿಯರಲ್ಲಿ ನಾಲ್ಕನೇ ಸ್ಥಾನದಲ್ಲಿದ್ದಾರೆ. ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುವುದನ್ನು ಬಿಟ್ಟರೆ ನೇಪಥ್ಯದಲ್ಲೇ ಹೆಚ್ಚಾಗಿ ಉಳಿಯಲು ಬಯಸುವ ಹುಡುಗಿ ಆಕೆ. ಅಮೆರಿಕದ ಒಲಿಂಪಿಕ್ಸ್ ಟ್ರಯಲ್ಸ್‌ನ 100 ಮೀ ಓಟದಲ್ಲಿ ಈ ಓಟಗಾರ್ತಿ ಅರ್ಹತೆ ಗಿಟ್ಟಿಸಿ ಹೆಚ್ಚು ಹೊತ್ತು ಆಗಿರಲಿಲ್ಲ. ಅಷ್ಟರಲ್ಲಿ ಉದ್ದೀಪನ ಮದ್ದು ಸೇವನೆ ಪರೀಕ್ಷೆಯ ಫಲಿತಾಂಶ ಬಂದಿತ್ತು. ಶಾ'ಕೆರ್ರಿ ಮದ್ದು ಸೇವಿಸಿರುವುದು ಆ ಪರೀಕ್ಷೆಯಲ್ಲಿ ದೃಢಪಟ್ಟಿತ್ತು.

'ನನ್ನ ಜೈವಿಕ ತಾಯಿ ಅಗಲಿಕೆಯ ನೋವನ್ನು ಮರೆತು ಒಲಿಂಪಿಕ್ ಕೂಟಕ್ಕೆ ಅರ್ಹತೆ ಗಿಟ್ಟಿಸಲು ನಾನು ಮದ್ದು ಸೇವಿಸಿದ್ದು ನಿಜ' ಎಂದು ಸಂದರ್ಶನವೊಂದರಲ್ಲಿ ಈ ಕ್ರೀಡಾಪಟು ಹೇಳಿಕೊಂಡಿದ್ದರು. 'ನಾನು ತೆಗೆದುಕೊಂಡಿದ್ದು ಸ್ಟೀರಾಯ್ಡ್ ಅಲ್ಲ. ಅದರೊಂದಿಗೆ ನನ್ನ ಹೆಸರು ತಳಕು ಹಾಕಿಕೊಳ್ಳುವುದನ್ನು ನಾನು ಇಷ್ಟಪಡುವುದಿಲ್ಲ' ಎಂದೂ ಹೇಳಿದ್ದರು. ಶಾ'ಕೆರ್ರಿ ಸೇವಿಸಿದ್ದು ಕೆನಾಬಿಸ್ ಎಂದು ಹೇಳಲಾಗಿತ್ತು. ಅಮೆರಿಕದಲ್ಲಿ ಈ ಮದ್ದು ಸೇವನೆಗೆ ನಿರ್ಬಂಧವೇನಿಲ್ಲ. ಆದರೆ, ಕ್ರೀಡೆಯ ನಿಯಮ ಕೇಳಬೇಕಲ್ಲ? ಒಲಿಂಪಿಕ್ ಕಮಿಟಿಯ ಕಾಂಗರೂ ಕೋರ್ಟ್‌ಗಳಿಂದ ಈ ಓಟಗಾರ್ತಿ ಅನ್ಯಾಯ ಅನುಭವಿಸಬೇಕಾಯಿತು ಎಂಬ ಅಭಿಪ್ರಾಯ ಅಮೆರಿಕದ ಕಪ್ಪುವರ್ಣೀಯ ಕ್ರೀಡಾಭಿಮಾನಿಗಳಲ್ಲಿದೆ. ವರ್ಣಭೇದ ನೀತಿಗೆ ಇದಕ್ಕಿಂತ ಉದಾಹರಣೆ ಬೇಕೆ ಎಂದು ಕೇಳಿದವರೂ ಇದ್ದಾರೆ. ಕುಟುಂಬದ ವಿಷಯ ಶಾ'ಕೆರ್ರಿ ಅವರ ಪಾಲಿಗೆ ಅತ್ಯಂತ ನಾಜೂಕಿನ ಸಂಗತಿ. ಏಕೆಂದರೆ, ಅವರೆಂದಿಗೂ ತಮ್ಮ ತಂದೆ ಇಲ್ಲವೆ ತಾಯಿಯೊಂದಿಗೆ ಇರಲಿಲ್ಲ. ಅಜ್ಜಿ ಬೆಟ್ಟಿ ಹಾರ್ಪ್ ಅವರ ಆರೈಕೆಯಲ್ಲಿ ಬೆಳೆದ ಅವರ ಪಾಲಿಗೆ, ಚಿಕ್ಕಮ್ಮನೇ ಅಮ್ಮ. 'ನಾನು ಇಂದು ಏನಾಗಿದ್ದೇನೆಯೋ ಅದಕ್ಕೆಲ್ಲ ನನ್ನ ಅಜ್ಜಿಯೇ ಕಾರಣ' ಎಂಬುದು ಅವರ ಹೇಳಿಕೆ.

ಟೋಕಿಯೊ ಒಲಿಂಪಿಕ್ ಕೂಟದ ಸಂದರ್ಭದಲ್ಲಿ ಅನುಭವಿಸಿದ ನಿರಾಸೆಯನ್ನು ಮರೆತು ಈ ಓಟಗಾರ್ತಿ ಪುಟಿದೆದ್ದು ನಿಂತ ಪರಿ ಅನನ್ಯ. ಡೈಮಂಡ್ ಲೀಗ್‌ನ 100 ಮೀ ಓಟದಲ್ಲಿ ಕಿರೀಟ ಧರಿಸಿದ ಈಕೆ, ಬುಡಾಪೆಸ್ಟ್‌ನಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲೂ ವೇಗದ ರಾಣಿಯಾಗಿ ಹೊರಹೊಮ್ಮಿದರು. 4x100 ಮೀ ರಿಲೆಯಲ್ಲೂ ಚಿನ್ನದ ಪದಕ ಒಲಿದುಬಂತು. ಕಳೆದ ಹದಿನೆಂಟು ತಿಂಗಳಿನಲ್ಲಿ ಸ್ಥಿರವಾದ ಪ್ರದರ್ಶನ ನೀಡಿ ಗಮನಸೆಳೆದರು. ಈಗ ಒಲಿಂಪಿಕ್ ಕೂಟದಲ್ಲೂ ಮಿಂಚಿದ್ದಾರೆ. 'ಕಳೆದ ಮೂರು ವರ್ಷಗಳಲ್ಲಿ ನನ್ನನ್ನು ನಾನು ಚೆನ್ನಾಗಿ ಅರ್ಥಮಾಡಿಕೊಂಡಿರುವೆ. ಕ್ರೀಡೆಗೆ ನಾನು ನೀಡಿರುವ ಕೊಡುಗೆ ಕುರಿತು ನನಗೆ ಅಪಾರ ಗೌರವವಿದೆ. ನನ್ನನ್ನು ಬೆಂಬಲಿಸುವ, ನನ್ನ ಮೇಲೆ ವಿಶ್ವಾಸ ಇರಿಸಿರುವ ಜನರಿಗಾಗಿ ನನ್ನ ಹೊಣೆ ಏನೆಂಬುದರ ಅರಿವೂ ನನಗಿದೆ' ಎಂದು ಶಾ'ಕೆರ್ರಿ ಅವರು ಹೇಳುವಾಗ ನೈಜ ಚಾಂಪಿಯನ್‌ನ ವ್ಯಕ್ತಿತ್ವ ಅವರಲ್ಲಿ ಎದ್ದು ಕಾಣುತ್ತದೆ. ಅಂದಹಾಗೆ, ಅವರೊಬ್ಬ ಸಲಿಂಗಕಾಮಿಯೂ ಹೌದು. ಲಿಂಗತ್ವ ಅಲ್ಪಸಂಖ್ಯಾತರ ಅಸ್ಮಿತೆಗಾಗಿಯೂ ಅವರು ದೊಡ್ಡದಾಗಿ ಧ್ವನಿ ಎತ್ತಿದ್ದಾರೆ. ಅಮೆರಿಕ ಮಾತ್ರವಲ್ಲ, ಜಗತ್ತಿನ ಎಲ್ಲ ಕ್ರೀಡಾಪ್ರೇಮಿಗಳ ಕಣ್ಮಣಿಯೂ ಅವರಾಗಿದ್ದಾರೆ. ಬೆನ್ನಿಗಿರುವ ಖ್ಯಾತಿಯನ್ನು ಟ್ರ್ಯಾಕ್ ಹೊರಗೇ ಬಿಟ್ಟು ಓಟಕ್ಕೆ ನಿಲ್ಲುವ ಶಾ'ಕೆರ್ರಿ ಅವರಿಗೆ ಕಾಣುವುದು ಗೆಲುವಿನ ಗೆರೆಯೊಂದೇ. ನಿಮ್ಮ ಗುರಿಯೂ ಹಾಗಿರಬೇಕು ಎಂಬುದು ಆಕೆ ಯುವಪೀಳಿಗೆಗೆ ಹೇಳುವ ಕಿವಿಮಾತು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65